INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -6, November-December, 2025
Page No,127-131
Peer -Reviewed, Refereed Journal

# ಕಮಲಾ ಹೆಮ್ಮಿಗೆ ಅವರ ಸಾಹಿತ್ಯದಲ್ಲಿ ಸ್ತ್ರೀ ಅಸ್ಮಿತೆ

ಶ್ರೀಮತಿ ಮಮತ ಸಿ.ಎಚ್.[1]

ಕನ್ನಡ ಸಾಹಿತ್ಯದ ಮೊದಲ ಉಪಲಬ್ಧ ಗ್ರಂಥ ಕವಿರಾಜಮಾರ್ಗದಿಂದ ಹಿಡಿದು ಹೊಸತಲೆಮಾರಿನ ಕವಿಗಳವರೆವಿಗೂ ಕನ್ನಡ ಸಾಹಿತ್ಯದ ಆಳ-ಹರವುಗಳು ಬಹಳ ವಿಸ್ತಾರಗೊಂಡಿವೆ. ಮಾತ್ರವಲ್ಲದೆ ಜಾಗತಿಕ ಸಾಹಿತ್ಯ ಮಟ್ಟದಲ್ಲಿ ತನ್ನದೇ ಆದ ಉತ್ಕೃಷ್ಟವಾದ ಅಸ್ಮಿತೆಯನ್ನು ಹೊಂದಿದೆ. ಅರ್ಥಾತ್ ಕನ್ನಡ ಸಾಹಿತ್ಯ ಪರಂಪರೆಯು ಅನನ್ಯವೂ, ಸಂಪದ್ಭರಿತವೂ ಹಾಗೂ ಸರ್ವಸಂಪನ್ನವೂ ಆಗಿದೆ. ಕನ್ನಡದ ಆದಿಕವಿ ಪಂಪ ಮಹಾಕವಿಯಿಂದ ಹಿಡಿದು ಇತ್ತೀಚಿನ ಪ್ರಸ್ತುತ ಕಾಲಮಾನದ ಕವಿಗಳವರೆಗೂ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಾದ ಮಹಾಕಾವ್ಯ, ಕಾವ್ಯ, ಕಥೆ, ಕಾದಂಬರಿ, ನಾಟಕ, ವಿಮರ್ಶೆ ಇತ್ಯಾದಿ ಪ್ರಕಾರಗಳಲ್ಲಿ ಕವಿಗಳು ಹಾಗೂ ಕವಯತ್ರಿಯರ ಕೊಡುಗೆ ಅನನ್ಯವಾದುದ್ದು.

ಮಹಿಳಾ ಸಾಹಿತ್ಯ ಪರಂಪರೆಯನ್ನು ಒಮ್ಮೆ ಅವಲೋಕಿಸಿದಾಗ ರಾಜಪ್ರಭುತ್ವ, ಪುರುಷ ರಾಜಕಾರಣ, ಕುಟುಂಬ ರಾಜಕಾರಣ ಹಾಗೂ ಧಾರ್ಮಿಕ ಒತ್ತಡಗಳ ಕಾರಣದಿಂದ ಹಳಗನ್ನಡ ಸಾಹಿತ್ಯದ ಕಾಲಘಟ್ಟದಲ್ಲಿ ಸ್ತ್ರೀ ಸಾಹಿತ್ಯ ಕೃಷಿಯಲ್ಲಿ ಮುನ್ನಲೆಗೆ ಬರದೇ ಇರುವುದು ಒಂದು ಕಠೋರ ಸತ್ಯವಾಗಿದೆ. ತದನಂತರದಲ್ಲಿ ಮಹಿಳಾ ಸಾಹಿತ್ಯ ಮಾತ್ರವಲ್ಲ, ಒಟ್ಟಾರೆ ಕನ್ನಡ ಸಾಹಿತ್ಯ ವಲಯದಲ್ಲಿ 12ನೇ ಶತಮಾನದಲ್ಲಿ ಆದಂತಹ ಬದಲಾವಣೆಗಳು ಗುರುತರವಾದದ್ದು. ಹೊಯ್ಸಳರ ಕಾಲದ ಕಂತಿಯನ್ನು ಕನ್ನಡದ ಮೊದಲ ಕವಯಿತ್ರಿ ಎಂದು ನಂಬಲಾಗಿದೆಯಾದರೂ, ಆಧಾರಪೂರ್ವಕವಾಗಿ ಅದೇ ಕಾಲದ ಸಂದರ್ಭದ ವಚನಕಾರ್ತಿ ಅಕ್ಕಮಹಾದೇವಿ ಅವರೇ ಕನ್ನಡದ ಮೊಟ್ಟ ಮೊದಲ ಕವಯಿತ್ರಿ. ಸ್ತ್ರೀವಾದದ ಮೊದಲ ಪ್ರತಿನಿಧಿಯಾದ ಹಾಗೂ ಸ್ತ್ರೀ ಬಂಡಾಯದ ಪ್ರಪ್ರಥಮ ಸಂಕೇತವಾಗಿ ಮೂಡಿ ಬಂದವರು. ಇವರ ಸಮಕಾಲೀನರಾಗಿ ಸಮಾಜದ ಸಂವೇದನೆಗಳಿಗೆ ಹೊಸ ಸಂಚಲನವನ್ನು ಮೂಡಿಸಿದವರು ಹಲವರಿದ್ದಾರೆ.

ಆಯ್ದಕ್ಕಿಲಕ್ಕಮ್ಮ, ಕದಿರವ್ವೆ, ಗೊಗ್ಗವ್ವೆ, ನೀಲಾಂಬಿಕೆ, ಸೂಳೆಸಂಕವ್ವೆ ಮುಂತಾದ ವಚನಗಾರ್ತಿಯರು ಅನುಭವ ಮಂಟಪದಡಿಯಲ್ಲಿ ತಮ್ಮ ನಿಲುವುಗಳನ್ನು ತಮ್ಮ ಸ್ಫೂರ್ತಿಯ ವಚನಗಳ ಮೂಲಕ

---

[1].ಸಂಶೋಧಕರು,ಭಾರತಿ ಕನ್ನಡ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಭಾರತೀ ಕಾಲೇಜು, ಭಾರತೀನಗರ,ಮದ್ದೂರು.

ಅಭಿವ್ಯಕ್ತಿಸಿರುವುದು ಇಂದಿಗೂ ಪ್ರಸ್ತುತವೆನಿಸುವಂತಹ ಅಭೂತಪೂರ್ವ ಅಂಶಗಳನ್ನು ಒಳಗೊಂಡಿವೆ. ಇಂತಹ ಪ್ರಮುಖ ಮಹಿಳಾ ವಚನಗಾರ್ತಿಯರು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿದುಕೊಂಡಿರುವುದು ಕಂಡುಬಂದಿದೆ.

ಹನ್ನೆರಡನೆಯ ಶತಮಾನದ ನಂತರ ಸ್ತ್ರೀಯರ ಕೃತಿ ರಚನೆಯ ನಿದರ್ಶನಗಳು ಹದಿನೆಂಟನೇ ಶತಮಾನದಲ್ಲಿ ಗೋಚರಿಸುತ್ತವೆ. ಅಂದರೆ ಸಂಚಿ ಹೊನ್ನಮ್ಮ, ಶೃಂಗಾರಮ್ಮ, ಚಲುವಾಂಬೆಯರೆಂಬ ಕವಯಿತ್ರಿಯರಾಗಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳಾದ ನವೋದಯ, ನವ್ಯ, ಪ್ರಗತಿಶೀಲ ಹಾಗೂ ದಲಿತ– ಬಂಡಾಯ ಸಾಹಿತ್ಯದಲ್ಲಿ ಮುಖ್ಯವಾಗಿ ಕೊಡಗಿನ ಗೌರಮ್ಮ, ತಿರುಮಲಾಂಬ, ಆರ್.ಕಲ್ಯಾಣಮ್ಮ, ತ್ರಿವೇಣಿ, ಎಂ.ಕೆ.ಇಂದಿರಾ, ಗೀತಾ ನಾಗಭೂಷಣ, ವೈದೇಹಿ, ಅನುಪಮ ನಿರಂಜನ, ವೀಣಾಶಾಂತೇಶ್ವರ, ಸಾರಾ ಅಬೂಬಕ್ಕರ್ ಮುಂತಾದ ಹಿರಿಯ ತಲೆಮಾರಿನ ಲೇಖಕಿಯರ ಜೊತೆಗೆ ಹೊಸತಲೆಮಾರಿನ ಕಮಲಾ ಹಂಪನಾ, ಕಮಲಾ ಹೆಮ್ಮಿಗೆ, ಪ್ರತಿಭಾ ನಂದಕುಮಾರ್, ಎಂ.ಎಸ್.ವೇದಾ, ಚ.ಸರ್ವಮಂಗಳ,ದು.ಸರಸ್ವತಿ, ಮಲ್ಲಿಕಾಘಂಟಿ, ಲತಾರಾಜಶೇಖರ್ ಮುಂತಾದವರು ಕಾಣಿಸಿಕೊಳ್ಳುತ್ತಾರೆ. ಇವರೆಲ್ಲರೂ ಮಹಾಕಾವ್ಯ, ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಅನುವಾದ, ಅಂಕಣ ಬರಹ ಹೀಗೆ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯವನ್ನು ರಚಿಸಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿರುವುದು ಶ್ಲಾಘನೀಯವಾದದ್ದು.

ಕಮಲಾ ಹೆಮ್ಮಿಗೆ ಅವರು ಸಾಹಿತ್ಯಕ ಕುಟುಂಬದ ಹಿನ್ನೆಲೆಯಿಂದ ಬಂದವರು. ಕನ್ನಡದ ಮೇರು ಸಾಹಿತಿಗಳಾದ ಪು.ತಿ.ನರಸಿಂಹಚಾರ್ ಹಾಗೂ ಗೊರೂರುರಾಮಸ್ವಾಮಿ ಅಯ್ಯಂಗಾರ್ ಅವರ ನಿಕಟ ಸಂಬಂಧಿಕರಾಗಿದ್ದರು. ಇವರ ತಾಯಿ ಶಾರದ ಹೆಮ್ಮಿಗೆಯವರೂ ಸಹ ಲೇಖಕಿಯಾಗಿ ಗುರುತಿಸಿಕೊಂಡವರು. ಕನ್ನಡ ಪ್ರತಿಭಾವಂತ ಲೇಖಕಿಯರಲ್ಲೊಬ್ಬರಾದ ಇವರು ಕನ್ನಡದ ನವ್ಯೋತ್ತರ ಕಾಲಘಟ್ಟದಲ್ಲಿ ಬಂದರೂ ಬಂಡಾಯ ಹಾಗೂ ಸ್ತ್ರೀವಾದಿ ಚಿಂತನೆಯ ಮನೋಧೋರಣೆಯನ್ನು ತಮ್ಮ ಸಾಹಿತ್ಯದಲ್ಲಿ ಬದುಕಿನುದ್ದಕ್ಕೂ ರೂಢಿಸಿಕೊಂಡವರು. ಬದುಕು ಮತ್ತು ಬರಹದಲ್ಲಿ ವೈರುಧ್ಯವಿಲ್ಲದ ಕಮಲಾ ಹೆಮ್ಮಿಗೆಯವರು ಸಮಾಜದ ಸಮಾನತೆಗಾಗಿ ಮಹಿಳಾ ಪರವಾಗಿ ನಿಂತವರು. ಶಿವಾನಂದ ಬೇಕಲ್ ಅವರು ಹೇಳಿರುವಂತೆ “ಪರಿಸರದ ಹದ್ದುಬಸ್ತಿನೊಳಗೇ ಗುಟುಕುಹೊಡೆದ ಈ ಲೇಖಕಿ, ಆ ಹದ್ದಿನಿಂದ ಹೊರಗಿಳಿದಾಗ ಪಾರಿವಾಳ, ಯಾರಲ್ಲೂ ಹೇಳಿಕೊಳ್ಳಲಾಗದಂಥ ಮಾನಸಿಕ ಚಡಪಡಿಕೆ ಇವರ ಕಣ್ಣುಗಳಲ್ಲಿ ಆಗೊಮ್ಮೆ ಈಗೊಮ್ಮೆ ಜಿನುಗಿದ್ದಿದೆ.”[1] ಅಂದರೆ ಕಮಲಾ ಹೆಮ್ಮಿಗೆ ಅವರ ಆಖ್ಯಾನ ಕಾದಂಬರಿಯಲ್ಲಿ ಮೂಡಿರುವ ಪುರುಷ ಪ್ರಧಾನ ವ್ಯವಸ್ಥೆ ಅವರು ಎಲ್ಲಿದ್ದರೂ ಸ್ವತಂತ್ರವಾಗಿ ಬದುಕುವ ಸ್ತ್ರೀಯರ ಅಸ್ಮಿತೆಯನ್ನು ಗುರುತಿಸುವಂತೆ ಮಾಡಿರುವುದು ವಿಶೇಷವಾದ ಸಂಗತಿಯಾಗಿದೆ.

ಭೂತಕಾಲದ ಸಂದರ್ಭ ಮತ್ತು ಪ್ರಸ್ತುತ ವರ್ತಮಾನದ ತಲ್ಲಣಗಳಿಗೆ ಪ್ರತಿರೋಧವನ್ನು ಒಡ್ಡಿ ಸ್ತ್ರೀಯು ಎಲ್ಲಾ ರಂಗಗಳಲ್ಲೂ ವಿಶೇಷವಾದ ಚಹರೆಗಳನ್ನು ಮೂಡಿಸಿರುವುದು ಅವರ ಪ್ರಯತ್ನದ ಫಲವಾಗಿ ಮೂಡಿಬಂದಿದೆ. ಅದೇ ರೀತಿಯಾಗಿ ಕಮಲಾ ಹೆಮ್ಮಿಗೆ ಅವರು ಕವಿತೆ, ಕಥೆಗಳ ಸೃಜನಶೀಲತೆಗೆ ಎಷ್ಟು ತೊಡಗಿಸಿಕೊಂಡರೋ ಅಷ್ಟೇ ಗಾಢವಾಗಿ ಸಾಮಾಜಿಕ ವೈಚಾರಿಕತೆಗೂ ಹೆಚ್ಚು ಒತ್ತು ಕೊಟ್ಟಿರುವುದು ಕಂಡುಬರುತ್ತದೆ. ಇವರು ತಮ್ಮ ಹೆಚ್ಚು ಸಮಯವನ್ನು ದೇವದಾಸಿಯರ ಸಂಕಷ್ಟಗಳ ಬಗೆಗಿನ ಕಾಳಜಿಗಾಗಿ ತೊಡಗಿಸಿದವರು. ಕನ್ನಡ ನವ್ಯೋತ್ತರ ಕಾಲದಲ್ಲಿ ಬಂಡಾಯದ ಒಂದು ಪ್ರಮುಖವಾದ ಸ್ತ್ರೀವಾದಿ ವೈಚಾರಿಕತೆಯನ್ನು ದೇವದಾಸಿಯರ ಜೀವನದೊಂದಿಗೆ ಅನುಸಂಧಾನ ಮಾಡುವ ಮೂಲಕ ಕ್ರಿಯಾಶೀಲತೆಯನ್ನು ತಮ್ಮ ಜೀವನದಲ್ಲಿ ಅಂತರ್ಗತ ಮಾಡಿಕೊಂಡವರು.

ನವ್ಯೋತ್ತರ ಬಂಡಾಯದ ಸಂದರ್ಭದಲ್ಲಿ ಬರೆಯುತ್ತಿದ್ದ ಕನ್ನಡದ ಬಹುತೇಕ ಲೇಖಕಿಯರು ಪ್ರಜ್ಞಾಪೂರ್ವಕವೋ, ಅಲ್ಲವೋ ಸ್ತ್ರೀ ಸಂಕಥನವನ್ನು ನಿರೂಪಿಸುವಲ್ಲಿ ತೊಡಗಿಸಿಕೊಂಡವರು. ಎಲ್ಲಾ ಲೇಖಕಿಯರ ಸ್ತ್ರೀಚಹರೆಗಳು ವಿಭಿನ್ನವಾಗಿದ್ದೂ ಆತ್ಮನಿಷ್ಠವಾಗಿರುತ್ತಿದ್ದವು.

ಮುಂದುವರೆದು ನವ್ಯ ಸಂವೇದನೆಯ ಇವರ ಕಥೆ, ಕವಿತೆಗಳಲ್ಲಿ ಒಂಟಿತನದ ಸ್ಥಿತಿ ಗುಪ್ತವಾಗಿ ಹರಡಿಕೊಂಡಿದೆ. ಗಾಢವಾಗಿ ಉಳಿಯದ ಸಂಬಂಧಗಳು ಹಲಬಗೆಯ ವಂಚನೆಗಳು ಹಾಗೂ ಏಕಾಕಿತನದ ಸುಪ್ತ ಆಕರ್ಷಣೆ ಎಲ್ಲವೂ ಕಮಲಾ ಹೆಮ್ಮಿಗೆಯವರನ್ನು ತಮ್ಮ ಪಾಡಿಗೆ ತಾವು ಸ್ವತಂತ್ರವಾಗಿ ಬದುಕುವಂತೆ ಪ್ರೇರೇಪಿಸಿರುವುದು ಇಲ್ಲಿ ಗೋಚರಿಸುತ್ತದೆ. ಅನಾಥ ಪ್ರಜ್ಞೆ ಹಾಗೂ ರಮ್ಯ ಪ್ರಜ್ಞೆಗಳೆರಡೂ ಒಟ್ಟಿಗೆ ಇವರ ಕವಿತೆಗಳಲ್ಲಿ ಕುತೂಹಲಕಾರಿಯಾಗಿ ಕಾಣಿಸಿಕೊಳ್ಳುತ್ತವೆ. ಸಾಹಿತ್ಯ ಕೃತಿಯ ಆರಂಭದಲ್ಲಿ ಪ್ರಕೃತಿ ವರ್ಣನೆಯ ಪ್ರಾಧಾನ್ಯತೆಯನ್ನು ಕಾಣುತ್ತೇವೆ. ಅಡಿಗರ ಪ್ರಭಾವವನ್ನೂ ಇವರ ಕವಿತೆಗಳಲ್ಲಿ ಗುರುತಿಸಬಹುದಾಗಿದೆ. ಮರ್ಮರ, ವಿಷಕನ್ಯೆ, ಮುಂಜಾನೆ ಬಂದವನು, ಕರುಳ ಸಂವಾದ ಕವನ ಸಂಕಲನಗಳಲ್ಲಿ ನಗರ ಜೀವನದ ಯಾಂತ್ರಿಕತೆ, ಏಕತಾನತೆ, ಸಾಮಾಜಿಕ ಕಳಕಳಿ ಹಾಗೂ ಸ್ತ್ರೀಪರ ಕಾಳಜಿ ಹಲವು ಸಂಗತಿಗಳು ಮೂಡಿಬಂದಿವೆ.

ಕಮಲಾ ಹೆಮ್ಮಿಗೆ ಅವರ 'ನಾನು ಅವನು ಮತ್ತು ಅವಳು' ಕಥಾ ಸಂಕಲನದಲ್ಲಿ ಬರುವ 'ಗುಂಭವಾದವಳು' ಎಂಬ ಕಥೆಯಲ್ಲಿ ಬರುವ ಮಹಿಳಾ ಪಾತ್ರದ ಚಿತ್ರಣವನ್ನು ಬಹಳ ಸ್ಪಷ್ಟವಾಗಿ ನಿರೂಪಿಸಿದ್ದಾರೆ. 'ವನಜ ದನಿಯೆತ್ತಿದರೆ ದುಂಬಿ ಝೇಂಕರಿಸಿದ ಹಾಗಿರುತ್ತೆ'[3] ಎಂಬ ಕಥೆಯ ಸಾಲು ಸ್ತ್ರೀ ಎಂಬ ಧ್ವನಿಯ ಸಂಕೇತ ಸಮಾಜದ ಬದುಕಿನೊಂದಿಗೆ ದುಂಬಿಯ ಝೇಂಕಾರದಂತೆ ಬೆರೆತುಕೊಂಡಿರುವ ಒಂದು ವಿಶೇಷವಾದ ನಿಲುವುಗಳನ್ನು ತೆರೆದಿಟ್ಟಿದ್ದಾರೆ. ಹೀಗೆ ಅವರ ಕಥಾಸಂಕಲನಗಳೂ ಗಂಡಿನ ದಮನಕ್ಕೆ ಒಳಗಾದ ಹೆಣ್ಣಿನ ಪಾತ್ರವನ್ನು ಮಾರ್ಮಿಕವಾಗಿ ಚಿತ್ರಿಸುವಲ್ಲಿ ಸಫಲತೆಯನ್ನು ಕಂಡಿವೆ. ಹಾಗೂ

ಉದ್ಯೋಗಸ್ಥ ಮಹಿಳೆಯರ ಸ್ವತಂತ್ರ ಬದುಕಿನ ಹಂದರವನ್ನು ವೈಶಾಲ್ಯತೆಯ ಮನೋವಿಶ್ಲೇಷಣಾತ್ಮಕ ನೆಲೆಯಲ್ಲಿ ಕಟ್ಟಿಕೊಟ್ಟಿರುವುದು ಇಲ್ಲಿ ವಿಶೇಷ.

ಇವರೆಲ್ಲರ ಸ್ತ್ರೀವಾದದ ಮೇಲೆ ಪಾಶ್ಚಾತ್ಯ ಸ್ತ್ರೀವಾದದ ಪ್ರಭಾವ ಎದ್ದು ಕಾಣುವುದಾದರೂ ಭಾರತೀಯ ಸ್ತ್ರೀವಾದ ಎನ್ನುವುದು ಪಾಶ್ಚಾತ್ಯ ಸ್ತ್ರೀವಾದದ ಪಡಿಯಚ್ಚಾಗದೇ ಅದು ತನ್ನದೇ ಬಹುತ್ವದ ಅಸ್ಮಿತೆಯನ್ನು ಪಡೆದುಕೊಂಡಿತು. ಇದಕ್ಕೆ ಕಾರಣ ಮಹಿಳಾ ಲೇಖಕಿಯರ ಆತ್ಮನಿಷ್ಠೆ, ಭಾರತೀಯ ಸಮಾಜದ ಬಹುಸ್ತರದ ಬಹುಸ್ವರೂಪದ ಸಂರಚನೆ, ವಿವಿಧ ಜಾತಿ, ಮತ ಪಂಥಗಳ ಸ್ತ್ರೀ ಸಮುದಾಯಗಳು ವಿಭಿನ್ನ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸ್ಥಿತಿಗತಿಗಳ ವಾಸ್ತವಗಳು. ಹಾಗಾಗಿ ಕಮಲಾ ಹೆಮ್ಮಿಗೆಯವರು ನಡೆಸಿದ ದೇವದಾಸಿಯರು, ಬುಡಕಟ್ಟುಗಳು, ಪಾರಂಪರಿಕ ಆಚರಣೆಗಳು ಮುಂತಾದವುಗಳ ಕುರಿತಾದ ಅಧ್ಯಯನಗಳು ಮತ್ತು ಚಳುವಳಿಯಾತ್ಮಕ ಚಟುವಟಿಕೆಗಳು ಭಾರತೀಯ ಸ್ತ್ರೀ ವಾದದ ಹೊಳಹುಗಳನ್ನು ಹೊಂದಿವೆ. ಈ ನೆಲೆಯಲ್ಲಿ ಕಮಲಾ ಹೆಮ್ಮಿಗೆ ಅವರ ಬರಹ ಮತ್ತು ಬದುಕು ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದದ ಮುಖೇನ ಸ್ತ್ರೀ ಬದುಕಿನ ಸುಧಾರಣೆಗೆ ಹೆಚ್ಚು ಒತ್ತುಕೊಟ್ಟಿರುವುದರಿಂದ ಇವರ ಸಾಹಿತ್ಯದ ಅಧ್ಯಯನ ಸಂದರ್ಭೋಚಿತ ಮತ್ತು ಪ್ರಸ್ತುತ ಕಾಲಮಾನಕ್ಕೆ ಅನಿವಾರ್ಯವೆನಿಸುತ್ತದೆ.

ಏ ಹುಡುಗಿ
ಹಕ್ಕಿಗಳು ಕಾಳು ಹೆಕ್ಕುತ್ತದೆಂದು
ಏಕೆ ಸಂಕಟ ಪಡುವಿ?[2]

ಕಮಲಾ ಹೆಮ್ಮಿಗೆ ಅವರ ಕವನದ ಸಾಲುಗಳು 'ಮುಂಜಾನೆ ಬಂದವನು' ಸಂಕಲನದ ಪ್ರಮುಖ ಸ್ತ್ರೀ ಸಂವೇದನೆಯ ನೆಲೆಗಳನ್ನು ಗುರುತಿಸುತ್ತವೆ. ಮಹಿಳೆಯರ ನೋವು, ನಲಿವು, ಸಂಕಟಗಳನ್ನು ಬಹಳ ಪ್ರತಿಮಾತ್ಮಕವಾಗಿ ತಮ್ಮ ಕವಿತೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಸಾಮಾಜಿಕ ಸಂರಚನೆಯಲ್ಲಿ ಸಾಗುವ ತೊಳಲಾಟವನ್ನು ಹೇಗೆ ಎದುರಿಸಬೇಕು ಎಂಬ ಧೈರ್ಯವನ್ನು ಸ್ತ್ರೀಪರವಾಗಿ ತಮ್ಮ ಅಂತಃಕರಣದ ಹಂಬಲವನ್ನು ಅಭಿವ್ಯಕ್ತಿಸಿರುವ ನೋಟ ಬಹಳ ಸೋಜಿಗವನ್ನುಂಟು ಮಾಡುತ್ತದೆ.

ಸ್ತ್ರೀವಾದ ಅಥವಾ ಫೆಮಿನಿಸಂ ಎನ್ನುವುದು ಒಂದು ರಾಜಕೀಯ ಸಿದ್ಧಾಂತ. ಅದು ಸ್ತ್ರೀ ಪುರುಷರ ನಡುವಿನ ಲಿಂಗಾಧಾರಿತ ತಾರತಮ್ಯಗಳ ಪ್ರಚಲಿತ ವ್ಯವಸ್ಥೆಯನ್ನು ಬದಲಾಯಿಸಲು ಹಕ್ಕೊತ್ತಾಯಿಸುತ್ತದೆ. ಹಾಗೆಯೇ ಸಾಮಾಜಿಕ, ರಾಜಕೀಯ, ಆರ್ಥಿಕ, ಮುಂತಾದ ಬದುಕಿನ ನೆಲೆಯಲ್ಲಿ ಸ್ತ್ರೀ ಪುರುಷರನ್ನು ಸಮಾನವಾಗಿ ಸ್ಥಾಪಿಸಬಲ್ಲ ವ್ಯವಸ್ಥೆಯಾಗಿ ನಡೆಯುವ ಹೋರಾಟವೇ ಅದರ ಮುಖ್ಯವಾದ ಕಾರ್ಯವಿಧಾನವಾಗಿದೆ. ಸ್ತ್ರೀ ವಾದ ಪಶ್ಚಿಮದಿಂದ ಭಾರತಕ್ಕೆ ಬಂದದ್ದು ಇತರ ಅನೇಕ ವಿಚಾರಧಾರೆಗಳ ಸಾಲಿಗೆ ಸೇರುತ್ತದೆ. ಒಟ್ಟಿನಲ್ಲಿ ಸ್ತ್ರೀವಾದ ಎನ್ನುವುದು ಒಂದು ಬದುಕಿನ ಕ್ರಮ, ಸ್ತ್ರೀಯ

ಮೇಲೆ ನಡೆಯುವ ಎಲ್ಲಾ ಬಗೆಯ ದೌರ್ಜನ್ಯಗಳನ್ನು ವಿರೋಧಿಸುವುದು ಹಾಗೂ ಇದು ಸ್ತ್ರೀ ವಾಚಕವಲ್ಲ. ಸಮಾಜ ಲಿಂಗವಾಚಕ ಎಂಬುದನ್ನು ಒತ್ತಿ ಹೇಳುವುದಾಗಿದೆ.

ಒಟ್ಟಾರೆಯಾಗಿ ಕಮಲಾ ಹೆಮ್ಮಿಗೆ ಅವರ ಕಥೆಗಳ ಸಂಕಥನಗಳಲ್ಲಿ ನಿರೂಪಿತವಾಗಿರುವ ಸ್ತ್ರೀ ವಾದದಲ್ಲಿ ಬಹು ಮುಖ್ಯವಾಗಿ ಕಾಣಿಸುವ ಸಂಗತಿಯೆಂದರೆ ಗಂಡು ಹೆಣ್ಣಿನ ನಡುವಿನ ಲೈಂಗಿಕ ಸಂಬಂಧ, ಕಾಮದ ಸಮಸ್ಯೆ, ಪ್ರಣಯದ ಸಂಶಯಗಳು– ಮುಂತಾದ ವಿಷಯಗಳನ್ನು ಕೇಂದ್ರವಾಗಿಟ್ಟುಕೊಂಡು ಕಥೆಗಳನ್ನು ರಚಿಸಿದ್ದಾರೆ. ಇವುಗಳು 20ನೆಯ ಶತಮಾನದ ಮಲೆಯಾಳಿ ಭಾಷೆಯ ಮಹತ್ವದ ಮಹಿಳಾ ಕಥೆಗಳನ್ನು ಸಂಗ್ರಹಿಸಿಕೊಡುವ ಮೂಲಕ ಮಲೆಯಾಳಿ ಸಂಸ್ಕೃತಿಯಲ್ಲಿನ ಸ್ತ್ರೀ ಸಂವೇದನೆಯನ್ನು ಕಟ್ಟಿಕೊಟ್ಟಿದ್ದಾರೆ. ಇಂದು ಸಾಕ್ಷರತೆಯಲ್ಲಿ ಗರಿಷ್ಠ ಮಟ್ಟದಲ್ಲಿರುವ ಕೇರಳದಲ್ಲಿ ಹೆಣ್ಣು ನಡೆದುಬಂದ ಕಲ್ಲುಮುಳ್ಳಿನ ಹಾದಿಯನ್ನು ಸಹೃದಯರ ಮುಂದಿಡುವ ಬಹುಮುಖ್ಯ ಉದ್ದೇಶವನ್ನು ಹೊಂದಿದ್ದಾರೆ. ಐತಿಹಾಸಿಕವಾಗಿ ಇಂತಹ ಮಹತ್ವದ ಸಾಹಿತ್ಯ ಕೃಷಿ ಮಾಡಿರುವ ಕಮಲಾ ಹೆಮ್ಮಿಗೆ ಅವರು ಸ್ತ್ರೀವಾದದ ಸಮಗ್ರ ಸ್ವರೂಪವನ್ನು ಕುರಿತಂತೆ ಕನ್ನಡ ಸಾಹಿತ್ಯದಲ್ಲೂ ಕೆಲಸಗಳು ಆಗಬೇಕೆಂಬ ಆಶಯವನ್ನು ಹೊಂದಿದೆ. ಪ್ರಸ್ತುತ ಸಂದರ್ಭದ ಲೇಖಕಿಯರಿಗೆ ದಾರಿದೀಪವಾಗಿದ್ದಾರೆ.

**ಅಡಿ ಟಿಪ್ಪಣಿಗಳು :**

1. ಕಮಲ ಹೆಮ್ಮಿಗೆ, ಆಖ್ಯಾನ ಕಾದಂಬರಿ – ಬೆನ್ನುಡಿ
2. ಕಮಲ ಹೆಮ್ಮಿಗೆ, ಮುಂಜಾನೆ ಬಂಧವನು – ಕವನ ಸಂಕಲನ, ಪು. 7
3. ಕಮಲ ಹೆಮ್ಮಿಗೆ – ನಾನು, ಅವನು ಮತ್ತು ಅವಳು, ಕಥಾಸಂಕಲನ, ಪು.48

**ಆಕರ ಗ್ರಂಥಗಳು**


1. ಡಾ.ಕಮಲಾ ಹೆಮ್ಮಿಗೆ(ಅ)–ಮಲೆಯಾಳದ ಪೆಣ್‌ಕಥನ,ಸೃಷ್ಟಿ ಪಬ್ಲಿಕೇಷನ್,ಬೆಂಗಳೂರು2021.
2. ಡಾ.ಕಮಲಾ ಹೆಮ್ಮಿಗೆ ಬಿ– ಕೇರಳದ ಕಾಂತಾಸಮ್ಮಿತೆ ಮನೋಹರ ಗ್ರಂಥಮಾಲಾ,ಧಾರವಾಡ.
3. ಡಾ.ಕಮಲಾ ಹೆಮ್ಮಿಗೆ–ಮುಂಜಾನೆ ಬಂದವನು(ಕವನ ಸಂಕಲನ),ಯಕ್ಷ ಪ್ರಕಾಶನ,ಧಾರವಾಡ.
4. ಡಾ.ಕಮಲಾ ಹೆಮ್ಮಿಗೆ–ನಾನು ಅವನು ಮತ್ತು ಅವಳು(ಕಥೆಗಳು)ಧಾರವಾಡ, 1996
5. ಡಾ.ಕಮಲಾ ಹೆಮ್ಮಿಗೆ– ಆಖ್ಯಾನ (ಕಾದಂಬರಿ), ಸ್ಫಟಿಕ ಪ್ರಕಾಶನ,ಮಂಗಳೂರು, 1981